# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 732 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.08.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಶಿಕ್ಷಣ ಇಲಾಖೆಯಲ್ಲಿ 1967 ರಿಂದ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಣೆ ಮಾಡುವ ಪ್ರಕ್ರಿಯೆ 2018 ರಿಂದ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಪ್ರಕ್ರಿಯೆ ಪ್ರಾರಂಭವಾಗಿ ಸುಮಾರು 6 ವರ್ಷಗಳು ಕಳೆದರೂ ಸಹ ಪೂರ್ಣಗೊಳಿಸದೆ ಇರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದರೊಂದಿಗೆ ಅಂತಿಮಗೊಳಿಸಲು ಎಷ್ಟು ವರ್ಷಗಳು ಬೇಕಾಗಬಹುದು; (2018 ರಿಂದ ಇಲ್ಲಿವರೆಗೆ ಈ ವಿಷಯದ ಕುರಿತು ಜಂಟಿ ನಿರ್ದೇಶಕರು ಆಯುಕ್ತರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದಿರುವ ಎಲ್ಲಾ ಸಭೆಗಳ ಮಾಹಿತಿ ನೀಡುವುದು) | ಬಂದಿದೆ.<br><br>ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಣೆ ಮಾಡಲು ಗಂಭೀರವಾಗಿ ಪರಿಗಣಿಸಿದ್ದು, ವೃಂದ ನಿರ್ವಹಣಾ ಉಪಸಮಿತಿಯು ವೃಂದ ನಿಯಮಗಳ ಸಮಗ್ರ ಪರಿಷ್ಕರಣಾ ಕರಡನ್ನು ಅಂತಿಮಗೊಳಿಸಿದೆ.<br><br>ಶಾಲಾ ಶಿಕ್ಷಣ ಇಲಾಖೆಯಲ್ಲಿ 73 ವಿವಿಧ ವರ್ಗದ ವೃಂದಗಳಿದ್ದು, ಇವುಗಳಲ್ಲಿ ಒಟ್ಟು 2,57,895 ಮಂಜೂರಾದ ಹುದ್ದೆಗಳಿರುವುದರಿಂದ ಪರಿಷ್ಕರಣೆ ಕಾರ್ಯ ಕೈಗೊಳ್ಳಲು ಕಾಲಾವಕಾಶದ ಅವಶ್ಯವಿರುತ್ತದೆ.<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಕುರಿತು ಪೂರಕವಾಗಿ ಕೆಲವು ವೃಂದಗಳ ಪದನಾಮವನ್ನು ಮರು ಪದನಾಮೀಕರಣಗೊಳಿಸಲು ಮತ್ತು SADPI (Commerce) ಮತ್ತು ADPI (Commerce) ವೃಂದಗಳನ್ನು ರದ್ದುಪಡಿಸಲು ಹಾಗೂ ಹಿರಿಯ ಬೆರಳಚ್ಚುಗಾರರ ವೃಂದವನ್ನು ಪ್ರಥಮ ದರ್ಜೆ ಸಹಾಯಕರ ವೃಂದದಲ್ಲಿ ವಿಲೀನಗೊಳಿಸುವ ಪ್ರಸ್ತಾವನೆಗೆ ಕಡತ ಸಂಖ್ಯೆ: ಇಪಿ 23 ಡಿಪಿಐ 2020 (ಭಾಗ-4) (1004720)ನ್ನು ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಿ ದಿನಾಂಕ: 11.02.2023 ರಂದು ಕಳುಹಿಸಲಾದ ಕಡತವನ್ನು ದಿನಾಂಕ:14/08/2025ರಂದು ಹಿಂದಿರುಗಿಸಿರುತ್ತದೆ. |

| | | |
|---|---|---|
| | | ಪ್ರಸ್ತುತ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯಗಳನ್ವಯ ಕರಡು ನಿಯಮಗಳನ್ನು ಸಿದ್ಧಪಡಿಸಿ, ಅದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು, ಸಚಿವ ಸಂಪುಟದ ಮುಂದೆ ಮಂಡಿಸಲು ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು.<br><br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ವೃಂದ ನಿರ್ವಹಣಾ ಉಪಸಮಿತಿಯು ದಿನಾಂಕ: 24.05.2018, 17.06.2020, 03.10.2024 ಮತ್ತು 23.07.2025 ಗಳಂದು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:23.10.2018 ರಂದು ನಡೆದಿರುವ ಸಭೆಗಳ ನಡಾವಳಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಸಿ.ಆ.ಸು. ಇಲಾಖೆಯ ನಡವಳಿ, ಸುತ್ತೋಲೆ ಮತ್ತು ನೆನಪೋಲೆಗಳ ಅನ್ವಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತ್ವರಿತವಾಗಿ ರೂಪಿಸುವ ಹಾಗೂ ಮೂರು ವರ್ಷಗಳಿಗೊಮ್ಮೆ ಪರಿಶೀಲಿಸುವಂತೆ ತಿಳಿಸಿದ್ದಾಗ್ಯೂ ಸಹ ಶಾಲಾ ಶಿಕ್ಷಣ ಇಲಾಖೆಯಲ್ಲಿ ಸುಮಾರು 58 ವರ್ಷಗಳಿಂದ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಬಗ್ಗೆ ವಿಳಂಬ ಮಾಡುತ್ತಿರಲು ಕಾರಣಗಳೇನು; | ಮೇಲಿನ ಉಪ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಂತೆ ಶಾಲಾ ಶಿಕ್ಷಣ ಇಲಾಖೆಯಲ್ಲಿ ಬಹಳಷ್ಟು ವೃಂದಗಳಿದ್ದು, ಪ್ರತಿಯೊಂದು ವೃಂದದ ಹುದ್ದೆಗಳ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯ ಪಡೆಯಲಾಗಿದೆ. ಈಗಾಗಲೇ ವೃಂದ ಪರಿಷ್ಕರಣಾ ಉಪ ಸಮಿತಿ ಕರಡು ತಿದ್ದುಪಡಿ ನಿಯಮಗಳನ್ನು ಅನುಮೋದಿಸಿರುತ್ತದೆ. |
| ಇ) | ನಿಯಮಗಳ ಪರಿಷ್ಕರಣೆಯಲ್ಲಿ ಪ್ರಥಮ ದರ್ಜೆ ಲೆಕ್ಕ ಸಹಾಯಕರು ಹುದ್ದೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಆದೇಶಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮರೆಮಾಚುತ್ತಿರುವ ಹಾಗೂ ವಿಳಂಬ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವ ರೀತಿ ಕ್ರಮಕೈಗೊಳ್ಳಲಾಗುವುದು; | ಇಲ್ಲ<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ / ತಿದ್ದುಪಡಿ ಮಾಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು (ಸೇವಾ ನಿಯಮಗಳು) ನಿರ್ದಿಷ್ಟ ಮಾರ್ಗಸೂಚಿಗಳನ್ನು ನಿಗದಿಪಡಿಸಿ ಸುತ್ತೋಲೆ / ಆದೇಶಗಳನ್ನು ಕಾಲ ಕಾಲಕ್ಕೆ ಹೊರಡಿಸಿರುತ್ತದೆ. ಈ ಮಾರ್ಗಸೂಚಿಗಳನ್ವಯ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಕ್ರಮವಹಿಸಲಾಗುತ್ತಿದೆ. ಇದರಲ್ಲಿ ಯಾವುದೇ ಆದೇಶ ಮರೆಮಾಚಿರುವುದಿಲ್ಲ. |

| | | |
|---|---|---|
| ಈ) | ಸುಮಾರು 6 ವರ್ಷಗಳು ಕಳೆದಾಗ್ಯೂ ಸಹ ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ ಪರಿಷ್ಕರಣೆ ಮಾಡಿ ಅಂತಿಮಗೊಳಿಸಲು ಶಾಲಾ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗಿರುವ ಸಮಸ್ಯೆಗಳೇನು; ಹಾಗಿದ್ದಲ್ಲಿ, ಸರ್ಕಾರ ಎಷ್ಟು ದಿನಗಳಲ್ಲಿ ಪರಿಷ್ಕರಿಸಲಾಗುವುದು; ಪರಿಷ್ಕರಣೆಯ ಕುರಿತು ಸರ್ಕಾರ ಭರವಸೆ ನೀಡುವುದೇ; ಪರಿಷ್ಕರಣೆ ಸಾಧ್ಯವಾಗದೇ ಇದ್ದಲ್ಲಿ ಸರ್ಕಾರ ಕೈಗೊಂಡಿರುವ ಪೂರಕ ಕ್ರಮಗಳೇನು; ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿ ಅಂತಿಮವಾಗಿ ಆದೇಶಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು? (ಮಾಹಿತಿ ನೀಡುವುದು) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯವು ಸ್ವೀಕೃತವಾಗಿರುತ್ತದೆ. ಆರ್ಥಿಕ ಇಲಾಖೆಯ ಅಭಿಪ್ರಾಯವು, ದಿನಾಂಕ:14/08/2025ರಂದು ಸ್ವೀಕೃತವಾಗಿರುವುದರಿಂದ ಸದರಿ ಅಭಿಪ್ರಾಯವನ್ನು ಕರಡು ನಿಯಮಗಳಲ್ಲಿ ಅಳವಡಿಸಿಕೊಂಡು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸುವ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |

ಇಪಿ 147 ಡಿಎಆರ್ 2025

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

**ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತು ದಿನಾಂಕ: 23.07.2025 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಭಾಗವಹಿಸಿದ್ದವರು:**

| ಕ್ರ. ಸಂ. | ಅಧಿಕಾರಿಯವರ ಹೆಸರು / ಹುದ್ದೆ |
|---|---|
| 1 | ಶ್ರೀಮತಿ ವಿ. ರಶ್ಮಿ ಮಹೇಶ್, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. |
| 2 | ಡಾ|| ಕೆ.ವಿ. ತ್ರಿಲೋಕ್ ಚಂದ್ರ, ಭಾ.ಆ.ಸೇ.,<br>ಆಯುಕ್ತರು,<br>ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. |
| 3 | ಶ್ರೀಮತಿ ವಿಜಯ ಈ ರವಿಕುಮಾರ್, ಕೆ.ಎ.ಎಸ್.,<br>ಜಂಟಿ ನಿರ್ದೇಶಕರು (ಆಡಳಿತ),<br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. |
| 4 | ಶ್ರೀಮತಿ ಅನಿತಾ ವಿ. ನಾಜರೆ,<br>ಸಹನಿರ್ದೇಶಕರು,<br>ನಿರ್ದೇಶಕರು (ಪ್ರಾಥಮಿಕ) (ಪ್ರಭಾರ),<br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. |
| 5 | ಡಾ|| ಈಶ್ವರ ಉಳ್ಳಾಗಡ್ಡಿ, ಕೆ.ಎ.ಎಸ್.,<br>ಅಪರ ಆಯುಕ್ತರು,<br>ಶಾಲಾ ಶಿಕ್ಷಣ ಇಲಾಖೆ, ಧಾರವಾಡ. |
| 6 | ಡಾ|| ಈಶ್ವರ ಹನುಮಂತ ನಾಯ್ಕ,<br>ಸಹ ನಿರ್ದೇಶಕರು (ಆಡಳಿತ)<br>ನಿರ್ದೇಶಕರು (ಪ್ರಭಾರ),<br>ಅಪರ ಆಯುಕ್ತರ ಕಛೇರಿ,<br>ಶಾಲಾ ಶಿಕ್ಷಣ ಇಲಾಖೆ, ಧಾರವಾಡ. |
| 7 | ಶ್ರೀ ಪ್ರಸನ್ನಕುಮಾರ್ ಜಿ.ಎಸ್.,<br>ಸರ್ಕಾರದ ಅಪರ ಕಾರ್ಯದರ್ಶಿ (ಆಡಳಿತ),<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. |
| 8 | ಶ್ರೀ ಪುರುಷೋತ್ತಮ್ ಕುಮಾರ್ ಕೆ.ಎಂ.,<br>ಹಿರಿಯ ಸಹಾಯಕ ನಿರ್ದೇಶಕರು,<br>(ಸಿಬ್ಬಂದಿ-1 ಮತ್ತು 1(ಎ) ಶಾಖೆ),<br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. |
| 9 | ಶ್ರೀಮತಿ ಮಮತಾ ರಾಣಿ ಬಿ.ಕೆ.,<br>ಶಾಖಾಧಿಕಾರಿ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. |
| 10 | ಶ್ರೀ ಶ್ರೀನಿಧಿಕುಮಾರ್ ಹೆಚ್.ಆರ್.,<br>ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ,<br>ಶಾಲಾ ಶಿಕ್ಷಣ ಇಲಾಖೆ. |

ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತು ಸಭೆಯಲ್ಲಿ ಹಾಜರಿದ್ದ ಮೇಲ್ಕಂಡ ಎಲ್ಲಾ ಅಧಿಕಾರಿಗಳನ್ನು ಸರ್ಕಾರದ ಅಪರ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ (ಆಡಳಿತ) ರವರು ಸ್ವಾಗತಿಸಿದರು.

ಜಂಟಿ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ ರವರು ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತು ಪ್ರಾತ್ಯಕ್ಷಿಕೆ ಮೂಲಕ ಸಭೆಗೆ ಮಾಹಿತಿ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ವೃಂದ ಪರಿಶೀಲನಾ ಉಪ ಸಮಿತಿಯು ದಿನಾಂಕ: 03.10.2024 ರಂದು ಮುಂದಿನ ಕ್ರಮಗಳ ಬಗ್ಗೆ ಹಾಗೂ ವೃಂದ ಪರಿಶೀಲನಾ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಬಹುದಾದ ಕುರಿತಂತೆ ನಿರ್ಣಯ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಪ್ರಸ್ತಾವನೆ ಬಗ್ಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳ ಅವಲೋಕನಗಳ ಕುರಿತು ಇಲಾಖೆಯ ಉತ್ತರಗಳನ್ನು ಸಹ ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ: 19.03.2025 ಮತ್ತು ದಿನಾಂಕ: 13.05.2025 ರಲ್ಲಿ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಅಂತಿಮ ವರದಿಗಳನ್ನು ಸಹ ಸಭೆಯು ಗಮನಿಸಿರುತ್ತದೆ.

ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತು ಸುಧೀರ್ಘವಾಗಿ ಚರ್ಚಿಸಿದ, ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿದೆ.

(1) ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಕುರಿತು ಪೂರಕವಾಗಿ ಕೆಲವು ವೃಂದಗಳ ಪದನಾಮವನ್ನು ಮರು ಪದನಾಮೀಕರಣಗೊಳಿಸಲು ಮತ್ತು SADPI (Commerce) ಮತ್ತು ADPI (Commerce) ವೃಂದಗಳನ್ನು ರದ್ದುಗೊಳಿಸಲು ಹಾಗೂ ಹಿರಿಯ ಬೆರಳಚ್ಚುಗಾರರ ವೃಂದವನ್ನು ಪ್ರಥಮ ದರ್ಜೆ ಸಹಾಯಕರ ವೃಂದದಲ್ಲಿ ವಿಲೀನಗೊಳಿಸುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಿ ಕಡತ ಸಂಖ್ಯೆ: ಇಪಿ 23 ಡಿಪಿಐ 2020 (ಭಾಗ-4) (1004720)ನ್ನು ದಿನಾಂಕ: 11.02.2023 ರಂದು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ಇದುವರೆವಿಗೂ ಕಡತ ಶಾಖೆಗೆ ಹಿಂದಿರುಗಿ ಬಂದಿರುವುದಿಲ್ಲವಾದ್ದರಿಂದ ಆರ್ಥಿಕ ಇಲಾಖೆಯ ಅಭಿಪ್ರಾಯದೊಂದಿಗೆ ಜರೂರಾಗಿ ಕಡತ ಹಿಂದಿರುಗಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಂದ ಅರೆ ಸರ್ಕಾರಿ ಪತ್ರ ಬರೆಯುವುದು.

(2) ಏತನ್ಮಧ್ಯೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಾಖೆಗಳಲ್ಲಿ ನಿರ್ವಹಿಸುತ್ತಿರುವ ತಿದ್ದುಪಡಿಗಳನ್ನು ಪ್ರಸ್ತುತ ಪ್ರಸ್ತಾಪಿಸಿರುವ ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಯಲ್ಲಿ ಒಳಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇನ್ನು ಮುಂದೆ ಎಲ್ಲಾ ವೃಂದಗಳ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪ್ರಸ್ತಾವನೆಯನ್ನು ಸಚಿವಾಲಯದ ಆಡಳಿತ ಶಾಖೆಯೇ ನಿರ್ವಹಿಸುವುದು.

(3) ಸುಮಾರು ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆಗಳು ಇಲ್ಲದಿರುವುದರಿಂದ ಈ ಬಗ್ಗೆ ಡಯಟ್‌ಗಳಲ್ಲಿ / ಸಂಸ್ಥೆಗಳಲ್ಲಿ / ಇತರೆ ಕಛೇರಿಗಳಲ್ಲಿ ಇರುವ ಸಮಾನಾಂತರ ಹುದ್ದೆಗಳ ಪೈಕಿ ಕಾರ್ಯಭಾರ ಕೊರತೆಯಿರುವ ಹುದ್ದೆಗಳನ್ನು ಪ್ರೌಢಶಾಲೆಗೆ ಸ್ಥಳಾಂತರಿಸಲು ಕ್ರಮವಹಿಸುವ ಬಗ್ಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

(4) ರಾಜ್ಯದ ಪ್ರೌಢ ಶಾಲೆಗಳಲ್ಲಿ ಮತ್ತು ಬಹುಮುಖ್ಯವಾಗಿ 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ಅಗತ್ಯ ಬೋಧಕೇತರ ಸಿಬ್ಬಂದಿಗಳ ಮತ್ತು ಗ್ರೂಪ್-ಡಿ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಹುದ್ದೆಗಳ ಸಮರ್ಪಕ ಮರು ಹಂಚಿಕೆಗೆ ಕ್ರಮವಹಿಸುವಂತೆ ಹಾಗೂ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಅವಶ್ಯವಿರುವ ಕಡೆಗೆ ಸ್ಥಳಾಂತರಿಸುವ ಕುರಿತಂತೆ ಕಛೇರಿಗಳಲ್ಲಿ ಮತ್ತು ಶಾಲೆಗಳಲ್ಲಿ ಲಭ್ಯವಿರುವ ಹುದ್ದೆಗಳನ್ನು ತುಲನೆ ಮಾಡಿ ಅಗತ್ಯತೆಯನ್ನು ಪರಿಶೀಲಿಸಿ ಸಮರ್ಪಕವಾಗಿ ಮರು ಹಂಚಿಕೆ ಮಾಡಲು ಆಯುಕ್ತರಿಗೆ ಸೂಚಿಸಿದೆ.

(5) 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ ಹೊಂದಿರುವ ಶಾಲೆಗಳಿಗೆ ಅಧೀಕ್ಷಕರ ಹುದ್ದೆಗಳನ್ನು ಹಂಚಿಕೆ ಮಾಡುವುದು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ತಮ್ಮ ಹಂತದಲ್ಲಿ ವಿವರವಾಗಿ ಪರಿಶೀಲಿಸಿ ಎಲ್ಲಾ ಅಂಶಗಳನ್ನೊಳಗೊಂಡ ಸಮಗ್ರ ಪ್ರಸ್ತಾವನೆಯನ್ನು ಸರ್ಕಾರಕ್ಕೆ 25ನೇ ಆಗಸ್ಟ್ 2025ರೊಳಗಾಗಿ ಸಲ್ಲಿಸುವಂತೆ, ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ವೃಂದ ಪರಿಶೀಲನಾ ಉಪ ಸಮಿತಿಯ ಸಭೆಯನ್ನು ದಿನಾಂಕ:30/08/2025ರಂದು ಏರ್ಪಡಿಸುವಂತೆ ಮತ್ತು ದಿನಾಂಕ: 05.09.2025ರೊಳಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ **ವೃಂದ ಪರಿಶೀಲನಾ ಸಮಿತಿಯ** ಮುಂದೆ ಮಂಡಿಸಲು ಕ್ರಮವಹಿಸುವಂತೆ ಸೂಚಿಸಿದೆ.

ಸಭಾಧ್ಯಕ್ಷರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ವಿ. ರಶ್ಮಿ ಮಹೇಶ್, ಭಾ.ಆ.ಸೇ.,)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

ಸಂಖ್ಯೆ: ಇಡಿ 23 ಡಿಪಿಐ 2022 (ಭಾಗ-1)

ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ, ದಿನಾಕ:03/10/2024ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ ವೃಂದ ಪರಿಶೀಲನಾ ಸಮಿತಿಯ ಉಪ ಸಮಿತಿ ಸಭಾ ನಡವಳಿಗಳು.

ಸಭೆಯಲ್ಲಿ ಭಾಗವಹಿಸಿದ್ದವರು:-

| | | |
|---|---|---|
| 1. | ಶ್ರೀ ರಿತೇಶ್‌ಕುಮಾರ್ ಸಿಂಗ್ ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | ಅಧ್ಯಕ್ಷರು |
| 2. | ಶ್ರೀಮತಿ ಬಿ.ಬಿ.ಕಾವೇರಿ, ಭಾ.ಆ.ಸೇ.,<br>ಆಯುಕ್ತರು,<br>ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು. | ಸದಸ್ಯರು |
| 3. | ಶ್ರೀ ಪ್ರಸನ್ನ ಕುಮಾರ್.ಜಿ.ಎಸ್<br>ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ),<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | - ಆಯೋಜಕರು ಮತ್ತು ಸದಸ್ಯರು |
| 4. | ಶ್ರೀಮತಿ ನಾಗರತ್ನ.ವಿ.<br>ಸರ್ಕಾರದ ಜಂಟಿ ಕಾರ್ಯದರ್ಶಿ<br>ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, | ಸದಸ್ಯರು |
| 5. | ಶ್ರೀ ಜನಾರ್ಧನ.ಡಿ.ಬಿ.,<br>ಸರ್ಕಾರದ ಉಪ ಕಾರ್ಯದರ್ಶಿ,<br>ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ, | ಸದಸ್ಯರು |
| 6. | ಶ್ರೀ ಅಜಯ್ ಕೊರಾಡೆ,<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ಆರ್ಥಿಕ ಇಲಾಖೆ. | ಸದಸ್ಯರು |

1967ರಿಂದ ಜಾರಿಯಲ್ಲಿರುವ ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ:30/05/2018ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಇಲಾಖೆಯ ಇಂದಿನ ಅಗತ್ಯಗಳಿಗೆ ಅನುಗುಣವಾಗುವಂತೆ ಕೆಲವು ವೃಂದಗಳ ಪದನಾಮ ಬದಲಾವಣೆ, ಕೆಲವು ವೃಂದಗಳನ್ನು ವಿಲೀನ ಮತ್ತು ಕೆಲವು ವೃಂದಗಳ ರದ್ದುಗೊಳಿಸುವಂತೆ ಮತ್ತು ನೇಮಕಾತಿ ವಿಧಾನದಲ್ಲಿ ಬದಲಾವಣೆಗಳನ್ನು ಪ್ರಸ್ತಾಪಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 97 ಎಸ್‌ಆರ್‌ಡಿ 2004, ದಿನಾಂಕ:08/10/2004 ಸಿಆಸುಇ 82 ಸೇನಿಡಿ 2006 ದಿನಾಂಕ:13/07/2007 ಮತ್ತು ಸುತ್ತೋಲೆ ಸಂಖ್ಯೆ:ಸಿಆಸುಇ 124 ಸೇನಿಡಿ 2012 ದಿನಾಂಕ:10/08/2012ರಲ್ಲಿ ನಿಗಧಿಪಡಿಸಲಾದ ವಿಧಾನದನ್ವಯ ಈ ಬಗ್ಗೆ ಪ್ರತ್ಯೇಕ ಕಡತಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು. ಈ ಕುರಿತ ಪ್ರಸ್ತುತ ಹಂತದ ಬಗ್ಗೆ ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

ಈ ಪ್ರಸ್ತಾವನೆಯ ಕುರಿತು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಕೋರಿದ್ದ ಮಾಹಿತಿಗಳನ್ನು ಒದಗಿಸಲಾಗಿತ್ತು. ತದನಂತರ ಸಿಆಸು ಇಲಾಖೆಯು ಮಾಡಿರುವ ಅವಲೋಕನೆಗಳಂತೆ ಕ್ರಮವಹಿಸಿ ಹೆಚ್ಚುವರಿ ಮಾಹಿತಿಗಳೊಂದಿಗೆ ಕಡತ ಸಂಖ್ಯೆ : ಇಪಿ 23 ಡಿಪಿಐ 2022 (ಭಾಗ -1) ರಲ್ಲಿ ಇನ್ನೊಮ್ಮೆ ಅಭಿಪ್ರಾಯ ಕೋರಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಯ ಬಗ್ಗೆ ಕಡತ ಸಂಖ್ಯೆ: ಇಪಿ 23 ಡಿಪಿಐ 2022 (ಭಾಗ - 2)ರಲ್ಲಿ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು. ಈ ಕುರಿತಂತೆ ಆರ್ಥಿಕ ಇಲಾಖೆಯು ಪರಿಶೀಲಿಸಿ ಸಮಗ್ರ ಪರಿಷ್ಕರಣೆಯ ಪ್ರಸ್ತಾವನೆಯಲ್ಲಿ ನಮೂದಿಸಿರುವ ವೃಂದ ಬಲಗಳ ಬಗ್ಗೆ ಕೆಲವು ಹೆಚ್ಚುವರಿ ಮಾಹಿತಿಗಳನ್ನು ಒದಗಿಸುವಂತೆ ಕೋರಿತ್ತು. ಅದರಂತೆ ಲಭ್ಯವಿರುವ ಮಾಹಿತಿಗಳೊಂದಿಗೆ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. ಇದಲ್ಲದೇ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವಿಧ ವೃಂದಗಳ ವಿಲೀನಾತಿ, ರದ್ದತಿ, ಮರು ಪದನಾಮೀಕರಣ ಮುಂತಾದ ಅಂಶಗಳ ಬಗ್ಗೆ ಮತ್ತು ಕಡತ ಸಂಖ್ಯೆ : ಇಪಿ 23 ಡಿಪಿಐ 2022 (ಭಾಗ-4) ರಲ್ಲಿ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿರುತ್ತದೆ.

ಈ ಪ್ರಸ್ತಾವನೆಯ ಬಗ್ಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯು ಕೆಲವು ಸಲಹೆಗಳೊಂದಿಗೆ, ಈ ಕುರಿತು ವೃಂದ ಪರಿಶೀಲನಾ ಸಮಿತಿಯ ಉಪ ಸಮಿತಿಯ ಸಭೆಯಲ್ಲಿ ಚರ್ಚಿಸಿ ತದನಂತರ ಸಭೆಯ ನಡವಳಿಯನ್ವಯ ಕರಡು ನಿಯಮಗಳನ್ನು ಸಿದ್ಧಪಡಿಸಿ ಪರಿಶೋಧನೆಗಾಗಿ ಕಳುಹಿಸುವಂತೆ ತಿಳಿಸಿದರು.

ಮೇಲಿನಂತೆ ಆರ್ಥಿಕ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯ ಬಾಕಿ ಇರುವ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಸಂಬಂಧಿಸಿದ ಇಲಾಖೆಗಳ ಪ್ರತಿನಿಧಿಗಳ ಗಮನ ಸೆಳೆಯಲಾಗಿ, ಸದರಿ ಪ್ರಸ್ತಾವನೆಯ ಕುರಿತಂತೆ ಇನ್ನೂ ಕೆಲವು ಹೆಚ್ಚುವರಿ ಮಾಹಿತಿಗಳನ್ನು ಮತ್ತು ಸ್ಪಷ್ಟೀಕರಣವನ್ನು ಬಯಸುತ್ತಿರುವುದನ್ನು ಸಭೆಯಲ್ಲಿ ಉಪಸ್ಥಿತರಿದ್ದ ಸಿಆಸು ಇಲಾಖೆಯ ಪ್ರತಿನಿಧಿಯವರು ಉಪ ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಈ ಕುರಿತಂತೆ ಶಾಲಾ ಶಿಕ್ಷಣ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳು ಸಿಆಸು ಇಲಾಖೆಯು ಬಯಸುವ ಮಾಹಿತಿಯನ್ನು ಖುದ್ದಾಗಿ ಒದಗಿಸಿ ಶೀಘ್ರವಾಗಿ ಅಭಿಪ್ರಾಯ ಪಡೆಯುವಲ್ಲಿ ಹಿಂಬಾಲಿಸಿ ಕ್ರಮವಹಿಸುವಂತೆ ಸೂಚಿಸಲಾಯಿತು.

ಪ್ರಸ್ತಾವನೆಯಲ್ಲಿ ನಮೂದಿಸಿರುವ ವಿವಿಧ ವೃಂದಗಳ ವೃಂದ ಬಲವನ್ನು ಸಮರ್ಥಿಸಲು ಅಗತ್ಯವಿರುವ ಆದೇಶಗಳನ್ನು ಅಂದರೆ, ಕ್ಷೇತ್ರ ಶಿಕ್ಷಣಾಧಿಕಾರಿ, ಪ್ರೌಢ ಶಾಲಾ ಮುಖ್ಯ ಶಿಕ್ಷಕರು, ಲೆಕ್ಕಾಧೀಕ್ಷಕರು, ದ್ವಿತೀಯ ದರ್ಜೆ ಸಹಾಯಕರು ಮತ್ತು ಗ್ರೂಪ್ ಡಿ ಹುದ್ದೆಗಳ ಪೈಕಿ ಒಟ್ಟು 1097 ಹುದ್ದೆಗಳನ್ನು ಸೃಜಿಸಿರುವ ಹುದ್ದೆಗಳ ಮಂಜೂರಾತಿ ಆದೇಶಗಳನ್ನು ಲಭ್ಯಪಡಿಸಬೇಕಾಗಿರುತ್ತದೆ ಎಂಬ ಮಾಹಿತಿಯನ್ನು ಆರ್ಥಿಕ ಇಲಾಖೆಯ ಪ್ರತಿನಿಧಿಯವರು ಸಭೆಯ ಗಮನಕ್ಕೆ ತಂದರು. ಈ ಕುರಿತಂತೆ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿ ಈಗಾಗಲೇ ಇಲಾಖೆಯಲ್ಲಿ ಲಭ್ಯವಿರುವ ಹುದ್ದೆಗಳ ಮಂಜೂರಾತಿ ಆದೇಶಗಳನ್ನು ಒದಗಿಸಲು ಕ್ರಮವಹಿಸಲಾಗಿದ್ದು, ಸುಮಾರು 1097 ಹುದ್ದೆಗಳ ಸೃಜನೆಯ ಆದೇಶ ಲಭ್ಯವಾಗುತ್ತಿಲ್ಲವೆಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. ಈಗಾಗಲೇ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಯು ವಿಳಂಬವಾಗಿರುವುದರಿಂದ ಪ್ರಸ್ತುತ ಲಭ್ಯವಿರುವ ಮಾಹಿತಿಯನ್ವಯ ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ನೀಡಲು ಕ್ರಮವಹಿಸುವಂತೆ ಮತ್ತು ವೃಂದ ಬಲಗಳ ವ್ಯತ್ಯಾಸವನ್ನು ಸರಿಪಡಿಸುವ ಬಗ್ಗೆ ತದನಂತರ ಪ್ರತ್ಯೇಕವಾಗಿ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

ಮೇಲಿನಂತೆ ಆರ್ಥಿಕ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳು ಅಭಿಪ್ರಾಯವನ್ನು ನೀಡಿದ ನಂತರ ಕರಡು ನಿಯಮಗಳನ್ನು ಸಿದ್ಧಪಡಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಪ್ರಸ್ತಾವನೆಯನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲು ನಿರ್ಣಯಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ರಿತೇಶ್ ಕುಮಾರ್ ಸಿಂಗ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣ ಕುರಿತಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:17.06.2020 ರಂದು ನಡೆದ ಸಭೆಯ ನಡವಳಿಗಳು:-**

ಉಪಸ್ಥಿತರು:-

1) ಶ್ರೀ ಎಸ್.ಆರ್. ಉಮಾಶಂಕರ್, ಭಾ.ಆ.ಸೇ., - ಅಧ್ಯಕ್ಷತೆ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ).

2) ಡಾ॥ ಕೆ.ಜಿ. ಜಗದೀಶ್, ಭಾ.ಆ.ಸೇ.,
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

3) ಶ್ರೀ ನಲಿನ್ ಅತುಲ್, ಭಾ.ಆ.ಸೇ.,
ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲಬುರಗಿ.
(ವಿಡಿಯೋ ಸಂವಾದದ ಮೂಲಕ)

4) ಶ್ರೀ ಸೋಮಶೇಖರ್ ಆರ್.,
ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ),
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ.

5) ಶ್ರೀಮತಿ ಮಮತ ವಿ. ನಾಯಕ,
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ),
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

6) ಶ್ರೀಮತಿ ಕೃಷ್ಣಾಜಿ ಕರಿಚಣ್ಣವರ,
ನಿರ್ದೇಶಕರು(ಪ್ರೌಢ ಶಿಕ್ಷಣ),
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

7) ಶ್ರೀಮತಿ ಟಿ.ಎನ್.ಗಾಯತ್ರಿದೇವಿ,
ಜಂಟಿ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು.

8) ಕೇಶವ ವಾಮನ ಪೆಟ್ಲೂರ,
ಹಿರಿಯ ಸಹಾಯಕ ನಿರ್ದೇಶಕರು,
ಅಪರ ಆಯುಕ್ತರ ಕಚೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸ್ವಾಗತಿಸುವ ಮೂಲಕ ಸಮಿತಿ ಸಭೆಗೆ ಚಾಲನೆ ನೀಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಮಾಡುವ ಕುರಿತಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕಡತ ಸಂಖ್ಯೆ : ಇಡಿ 1 ಡಿಪಿಐ 2018ರಲ್ಲಿ ವ್ಯವಹರಿಸಿ ಮೂರು ಪ್ರತ್ಯೇಕ ಭಾಗ ಕಡತಗಳಲ್ಲಿ ಆರ್ಥಿಕ ಇಲಾಖೆ, ಸಿಆಸುಇ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯಕ್ಕೆ ಕಳುಹಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ದಿನಾಂಕ:23/10/2018ರಂದು ಸದರಿ ಪ್ರಸ್ತಾವನೆಯನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಸಮಗ್ರ ಪರಿಷ್ಕರಣೆ ಬಗ್ಗೆ ಚರ್ಚಿಸಿ ಅನುಮೋದಿಸಲಾದ ಅಂಶಗಳನ್ವಯ ಕರಡು ತಿದ್ದುಪಡಿ ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಬೇಕಾಗಿರುತ್ತದೆ. ಈ ಮಧ್ಯೆ ಆರ್ಥಿಕ ಇಲಾಖೆ, ಸಿಆಸುಇ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳು ಸಮಗ್ರ ತಿದ್ದುಪಡಿ ಪ್ರಸ್ತಾವನೆ ಬಗ್ಗೆ ಅಭಿಪ್ರಾಯ/ಸಲಹೆಗಳೊಂದಿಗೆ ಭಾಗ ಕಡತಗಳನ್ನು ಕಳುಹಿಸಿರುತ್ತಾರೆ.

ಪ್ರಸ್ತುತ, ಆರ್ಥಿಕ ಇಲಾಖೆ, ಸಿಆಸುಇ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯ ಮತ್ತು ಸಲಹೆಗಳ ಕುರಿತಂತೆ ಚರ್ಚಿಸಿ ಅಂತಿಮ ಕರಡು ನಿಯಮಗಳಲ್ಲಿ ಅಳವಡಿಸಿಕೊಂಡು ಕರಡು ನಿಯಮಗಳನ್ನು ಸಿದ್ಧಪಡಿಸುವ ಬಗ್ಗೆ ಪ್ರಸ್ತುತ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

I. ಸಿಆಸು ಇಲಾಖೆಯ ಅಭಿಪ್ರಾಯ/ಸಲಹೆಗಳ ಬಗ್ಗೆ:-

| ಕ್ರಸಂ. | ಅಭಿಪ್ರಾಯ | ಸಭೆಯ ನಿರ್ಣಯ |
|---|---|---|
| 1. | <u>ಕ್ರಮ ಸಂಖ್ಯೆ:07 **Deputy Director of Public Instruction (DDPI)**</u> : ಇಲಾಖಾ ಮುಖ್ಯಸ್ಥರ ಹುದ್ದೆಯನ್ನು ಮಾತ್ರ ಆಯ್ಕೆ ಮೂಲಕ ಮುಂಬಡ್ತಿಯಿಂದ ತುಂಬಲು ನಿಯಮಗಳಲ್ಲಿ ಅವಕಾಶವಿರುವುದರಿಂದ ಡಿಡಿಪಿಐ ಹುದ್ದೆಯನ್ನು ಆಯ್ಕೆ ಮೂಲಕ ಮುಂಬಡ್ತಿಯಿಂದ ತುಂಬಲು ನಿರ್ಧರಿಸಿರುವುದಕ್ಕೆ ಸಕಾರಣವನ್ನು ಒದಗಿಸುವಂತೆ ತಿಳಿಸಲಾಗಿದೆ. | ಪ್ರಸ್ತುತ ಉಪ ನಿರ್ದೇಶಕರ ವೃಂದದ ಹುದ್ದೆಗೆ ಅರ್ಹತೆ ಮತ್ತು ಜೇಷ್ಠತೆ ಆಧಾರದಲ್ಲಿ ಬಡ್ತಿ ನೀಡಲು ಅವಕಾಶವಿದ್ದು, "ಆಯ್ಕೆ ಮೂಲಕ" ಬಡ್ತಿ ನೀಡಲು ಪ್ರಸ್ತಾಪಿಸಿರುವುದಿಲ್ಲ. ಆದ್ದರಿಂದ ಪ್ರಸ್ತಾಪಿತ ಕರಡು ನಿಯಮಗಳಲ್ಲಿ "by selection" ಎಂದಿರುವುದನ್ನು ಕೈಬಿಡಲು ನಿರ್ಣಯಿಸಲಾಯಿತು. |
| 2 | <u>ಕ್ರಮ ಸಂಖ್ಯೆ :07 **Educational Officers(Tutorials)**</u> : ಸದರಿ ವೃಂದದ ಶೇ. 75ರಷ್ಟು ಹುದ್ದೆಗಳನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರು ವೃಂದದಿಂದ ಸೇವಾ ಹಿರಿತನದ ಆಧಾರದ ಮೇಲೆ ಮತ್ತು ಸಮನಾಂತರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಹಾಗೂ ಶೇ. 25ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಈ ಹಿಂದೆ ಕಳುಹಿಸಲಾಗಿದ್ದ ಕರಡು ನಿಯಮಗಳಲ್ಲಿ ಶೇ. | ಸದರಿ ವೃಂದದ ಶೇ. 75ರಷ್ಟು ಹುದ್ದೆಗಳನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರು ವೃಂದದಿಂದ ಸೇವಾ ಹಿರಿತನದ ಆಧಾರದ ಮೇಲೆ ಮತ್ತು ಸಮನಾಂತರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಹಾಗೂ ಶೇ. 25ರಷ್ಟು ಹುದ್ದೆಗಳನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಮನಾಂತರ ವೃಂದದಲ್ಲಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ಸೇವಾ ನಿರತ |

| | | |
|---|---|---|
| | 25ರಷ್ಟು ಹುದ್ದೆಗಳನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಮನಾಂತರ ವೃಂದದಲ್ಲಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ಸೇವಾ ನಿರತ ಶಿಕ್ಷಕರಿಂದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಯಿಂದ ಭರ್ತಿ ಮಾಡಲು ಉದ್ದೇಶಿಸಲಾಗಿತ್ತು. ಆದುದರಿಂದ ಶೇ. 25 ರಷ್ಟು ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿಗಳಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದೇ ಅಥವಾ ಸೇವಾ ನಿರತ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದೇ ಎಂಬುದನ್ನು ಸ್ಪಷ್ಟಪಡಿಸುವಂತೆ ತಿಳಿಸಲಾಗಿದೆ. | ಶಿಕ್ಷಕರಿಂದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಯಿಂದ ಭರ್ತಿ ಮಾಡಲು ಉದ್ದೇಶಿಸಲಾಗಿದೆ. |
| 3 | **ಕ್ರಮ ಸಂಖ್ಯೆ:07 Educational Officers (Tutorials)** : ಪ್ರಸ್ತಾಪಿತ ಕರಡು ನಿಯಮಗಳಲ್ಲಿ **ಕ್ರಮ ಸಂಖ್ಯೆ:39 : ಹಿರಿಯ ಮುಖ್ಯ ಶಿಕ್ಷಕರು (ಹಿರಿಯ ಪ್ರಾಥಮಿಕ ಶಾಲೆ) ಮತ್ತು ಕ್ರಮ ಸಂಖ್ಯೆ:64 (ಎ) ಮುಖ್ಯ ಶಿಕ್ಷಕರು / ಮುಖ್ಯ ಶಿಕ್ಷಕಿಯರು (ಹಿರಿಯ ಪ್ರಾಥಮಿಕ ಶಾಲೆ)**: ಸದರಿ ವೃಂದಗಳ ಹುದ್ದೆಗಳನ್ನು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಂದ 75:25 ಅನುಪಾತದಲ್ಲಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಿದೆ.<br><br>ಮುಂಬಡ್ತಿಗೆ ಪೋಷಕ ವೃಂದಗಳ ವೃಂದ ಬಲದಲ್ಲಿನ ಹುದ್ದೆಗಳ ಸಂಖ್ಯೆ ಅನುಸಾರವಾಗಿ ಅನುಪಾತದಲ್ಲಿ ನಿಗಧಿಪಡಿಸುವಂತೆ ತಿಳಿಸಲಾಗಿದೆ. | ಪ್ರಸ್ತುತ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ (ವೇತನ ಶ್ರೇಣಿ ರೂ. 30350–58250) ಹುದ್ದೆಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ ) ಮತ್ತು ಪದವಿಧರ ಶಿಕ್ಷಕರು (6 ರಿಂದ 8ನೇ ತರಗತಿ) ಈ ವೃಂದಗಳಿಂದ 75:25 ರ ಅನುಪಾತದಲ್ಲಿ ಬಡ್ತಿ ಮೂಲಕ ತುಂಬಲು ಅವಕಾಶವಿದೆ. ಅದರಂತೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ಹೊಂದುವ ಪದವಿಧರ ಶಿಕ್ಷಕರು ಮುಖ್ಯ ಶಿಕ್ಷಕರ ಸಾಮಾನ್ಯ ಜ್ಯೇಷ್ಠತೆಯ ಆದಾರದಲ್ಲಿ ಹಿರಿಯ ಮುಖ್ಯ ಶಿಕ್ಷಕರ **(ವೇತನ ಶ್ರೇಣಿ ರೂ. 33450–62600)** ಹುದ್ದೆಗೆ ಹೊಂದಲು ಅವಕಾಶವಿರುತ್ತದೆ. ಆದ್ದರಿಂದ ನೇರವಾಗಿ ಪದವಿಧರ ಶಿಕ್ಷಕರ ಹುದ್ದೆಯಿಂದ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವುದು ಸಮಂಜಸವಾಗಲಾರದು. ಹೀಗಾಗಿ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಯ ನೇಮಕಾತಿ ಕಾರ್ಯವಿಧಾನವನ್ನು ಮೊದಲಿನಂತೆ ಉಳಿಸಿಕೊಳ್ಳಲು, ಅಂದರೆ, ಹಿರಿಯ ಮುಖ್ಯ ಶಿಕ್ಷಕರ ಹುದ್ದೆಯನ್ನು ಕನಿಷ್ಠ ಎರಡು ವರ್ಷಗಳ ಸೇವೆಯನ್ನು ಪೂರೈಸಿರುವ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ಜೇಷ್ಠತೆ ಆಧಾರದಲ್ಲಿ ಬಡ್ತಿ ಮೂಲಕ ತುಂಬಲು ನಿರ್ಣಯಿಸಲಾಗಿದೆ. |
| 4 | **ಕ್ರಮ ಸಂಖ್ಯೆ :82 First Division Assistant:**ಸದರಿ ವೃಂದದ ನೇಮಕಾತಿ | ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಲರ್ಕ ಕಮ್ ಟೈಪಿಸ್ಟ ವೃಂದವನ್ನು ಡಾಟಾ |

| | | |
|---|---|---|
| | ವಿಧಾನದ ಕಲಂನಲ್ಲಿ ನೇರ ನೇಮಕಾತಿ ಶೀರ್ಷಿಕೆಯಡಿ ಕರ್ನಾಟಕ ಸಿವಿಲ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978 ರನ್ವಯ ಎಂದು ನಮೂದಿಸುವಂತೆ ಹಾಗೂ ಸದರಿ ವೃಂದದ ಮುಂಬಡ್ತಿಗೆ ಡಾಟಾ ಎಂಟ್ರಿ ಆಪರೇಟರ್ ವೃಂದವನ್ನು ಪರಿಗಣಿಸಿರುವುದರ ಕುರಿತು ಪರಿಶೀಲಿಸುವಂತೆ ತಿಳಿಸಲಾಗಿದೆ. | ಎಂಟ್ರಿ ಆಪರೇಟರ್ ಎಂದು ಪರಿವರ್ತಿಸಿರುವುದರಿಂದ ಪ್ರಥಮ ದರ್ಜೆ ಸಹಾಯಕರ ವೃಂದದ ಹುದ್ದೆಗೆ ಡಾಟಾ ಎಂಟ್ರಿ ಆಪರೇಟರ್ ವೃಂದವನ್ನು ಪರಿಗಣಿಸಿರುವುದು ಸಮಂಜಸವಾಗಿದೆ.<br>ನೇಮಕಾತಿ ವಿಧಾನದ ಕಲಂನಲ್ಲಿ ನೇರ ನೇಮಕಾತಿ ಶೀರ್ಷಿಕೆಯಡಿ ಕರ್ನಾಟಕ ಸಿವಿಲ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978 ರನ್ವಯ ಎಂದು ನಮೂದಿಸಲು ಸಲಹೆ ಮಾಡಿರುವುದನ್ನು ಒಪ್ಪಲಾಯಿತು |
| 5 | **<u>ಕ್ರಮ ಸಂಖ್ಯೆ:82 Second Division Assistant</u>** ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರಲ್ಲಿ ಶೇ. 67 ರಷ್ಟು ಹುದ್ದೆಗಳನ್ನು ನೇರನೇಮಕಾತಿ ಮೂಲಕ ಹಾಗೂ ಶೇ. 33 ರಷ್ಟು ಹುದ್ದೆಗಳನ್ನು ವಾಹನ ಚಾಲಕ ವೃಂದದಿಂದ ವರ್ಗಾವಣೆ ಮೂಲಕ ಭರ್ತಿ ಮಾಡಲು ಹಾಗೂ ವರ್ಗಾವಣೆಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಗ್ರೂಪ್-ಡಿ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಆಸ್ಪದವಿರುವುದರಿಂದ ಸದರಿ ನಿಯಮಗಳನ್ವಯ ಪರಿಶೀಲಿಸಿ ನೇಮಕಾತಿ ವಿಧಾನ ನಿಗಧಿಪಡಿಸುವಂತೆ ತಿಳಿಸಲಾಗಿದೆ. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಲಹೆಯಂತೆ ಈ ವೃಂದದ ಕುರಿತು ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರಲ್ಲಿನ ಉಪಬಂಧವನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. |
| 6 | **<u>ಕ್ರಮ ಸಂಖ್ಯೆ:84 ಶೀಘ್ರಲಿಪಿಗಾರರು :</u>** ಸದರಿ ವೃಂದದ ಹುದ್ದೆಗಳನ್ನು ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರನ್ವಯ ಕರ್ನಾಟಕ ಲೋಕಸೇವ ಆಯೋಗದಿಂದ ಭರ್ತಿ ಮಾಡಲು ಕರಡು ನಿಯಮಗಳಲ್ಲಿ ಆಸ್ಪದ ಕಲ್ಪಿಸಿರುವುದರಿಂದ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಕರೆಯುವುದು, ಆಯ್ಕೆ ಪಟ್ಟಿ ತಯಾರಿಸುವುದು ಇತ್ಯಾದಿ ಅಂಶಗಳನ್ನು ನಿಯಮಗಳಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಲಹೆಯನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. |
| 7 | **<u>ಕ್ರಮ ಸಂಖ್ಯೆ:84 (ಎ) Data Entry Operator:</u>** ಸದರಿ ವೃಂದದ ವೇತನ ಶ್ರೇಣಿ ವಿದ್ಯಾರ್ಹತೆ ಕುರಿತಂತೆ ಸಿಆಸುಇ (ಇ-ಆಡಳಿತ) ದಿಂದ ಅಭಿಪ್ರಾಯ ಪಡೆಯುವಂತೆ | ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಇಲಾಖೆ)ಯ ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು. |

| | | |
|---|---|---|
| | ತಿಳಿಸಲಾಗಿದೆ. | |
| 8 | ಕ್ರಮ ಸಂಖ್ಯೆ:85 ಬೆರಳಚ್ಚುಗಾರರು: ಸದರಿ ವೃಂದದ ಹುದ್ದೆಗಳನ್ನು ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983 ರನ್ವಯ ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕರಡು ನಿಯಮಗಳಲ್ಲಿ ಆಸ್ಪದ ಕಲ್ಪಿಸಿರುವುದರಿಂದ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಕರೆಯುವುದು, ಆಯ್ಕೆ ಪಟ್ಟಿ ತಯಾರಿಸುವುದು ಇತ್ಯಾದಿ ಅಂಶಗಳನ್ನು ನಿಯಮಗಳಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ತಿಳಿಸಲಾಗಿದೆ. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಲಹೆಯನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. |
| 9 | ಕ್ರಮ ಸಂಖ್ಯೆ:88 : ಅಟೆಂಡರ್ಸ್ : ಸದರಿ ವೃಂದದ ಮುಂಬಡ್ತಿಗೆ ಕನಿಷ್ಠ ಐದು ವರ್ಷಗಳ ಅರ್ಹತಾದಾಯಕ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳು ಅರ್ಹತಾದಾಯಕ ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ಪರಿಗಣಿಸಲು ಆಸ್ಪದ ಕಲ್ಪಿಸಲಾಗಿದೆ. ಗ್ರೂಪ್ಡ ಡಿ ವೃಂದದಿಂದ ಮುಂಬಡ್ತಿಗೆ ಕನಿಷ್ಠ ಐದು ವರ್ಷಗಳ ಅರ್ಹತಾದಾಯಕ ಸೇವೆಯನ್ನು ನಿಗಧಿಪಡಿಸುವಂತೆ ತಿಳಿಸಲಾಗಿದೆ. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಲಹೆಯನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. |

(1) ಆರ್ಥಿಕ ಇಲಾಖೆ :-

| ಕ್ರ.ಸಂ. | ಅಭಿಪ್ರಾಯ | ಸಭೆಯ ನಿರ್ಣಯ |
|---|---|---|
| 1. | ಪ್ರಸ್ತುತ ಆಡಳಿತ ಇಲಾಖೆಯು ಹುದ್ದೆಗಳು ಸೃಜನೆಯಾಗಿರುವ ಯಾವುದೇ ಆದೇಶದ ಪ್ರತಿ ಕಡತದಲ್ಲಿ ಒದಗಿಸಿರುವುದಿಲ್ಲ. ಆದ್ದರಿಂದ, ಭಾಗ-1 ಕ್ರಮ ಸಂಖ್ಯೆ:8ರಲ್ಲಿನ ಪ್ರೌಡ ಶಾಲೆಯ ಮುಖ್ಯ ಶಿಕ್ಷಕರು/ ಶಿಕ್ಷಕಿಯರು 88 ಹುದ್ದೆ ಮತ್ತು 304 ಹುದ್ದೆಗಳು ಹಾಗೂ ಭಾಗ 2 ರಲ್ಲಿನ ಕ್ರಮ ಸಂಖ್ಯೆ:23 ಪ್ರೌಢ ಶಾಲಾ ಸಹ ಶಿಕ್ಷಕ/ ಶಿಕ್ಷಕರ ಗ್ರೇಡ್-2ರ 1520 ಹುದ್ದೆಗಳು ಹಾಗೂ ಕ್ರಮ ಸಂಖ್ಯೆ:33ರ ದೈಹಿಕ ಶಿಕ್ಷಕರು ಗ್ರೇಡ್-1 ರ 304 ಹುದ್ದೆಗಳು ಮತ್ತು ಭಾಗ-4 ಕ್ರಮ ಸಂಖ್ಯೆ:49ರ ಲೆಕ್ಕಾಧೀಕ್ಷಕರು 34 ಹುದ್ದೆಗಳ ಸೃಜಿಸಿರುವ ಪ್ರತಿಗಳನ್ನು ಒದಗಿಸುವುದು. | ಪ್ರೌಢ ಶಾಲಾ ಮುಖ್ಯ ಶಿಕ್ಷಕ/ಶಿಕ್ಷಕಿಯರ 88 ಹುದ್ದೆಗಳ ಮಂಜೂರಾತಿ ಆದೇಶ ಹೊರತುಪಡಿಸಿ ಉಳಿದ ಹುದ್ದೆಗಳ ಮಂಜೂರಾತಿ ಆದೇಶ ಲಭ್ಯವಿದೆ. ಪ್ರೌಢ ಶಾಲಾ ಮುಖ್ಯ ಶಿಕ್ಷಕ/ಶಿಕ್ಷಕಿಯರ 88 ಹುದ್ದೆಗಳ ಮಂಜೂರಾತಿ ಕುರಿತು ಪ್ರೌಢ-2 ಶಾಖೆಯಲ್ಲಿ ಕಡತ ನಿರ್ವಹಿಸಲಾಗುತ್ತಿದ್ದು, ಸದರಿ ಮಾಹಿತಿಯನ್ನು ಪಡೆದು, ಎಲ್ಲಾ ಅಗತ್ಯ ಮಾಹಿತಿಯೊಂದಿಗೆ ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಲು ನಿರ್ಣಯಿಸಲಾಯಿತು. |

(2) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ:-

| ಕ್ರಸಂ. | ಅಭಿಪ್ರಾಯ | ಸಭೆಯ ನಿರ್ಣಯ |
|---|---|---|
| 1 | ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಈ ಇಲಾಖೆಯ ಅನೇಕ ಕಡತಗಳಲ್ಲಿ ಅಭಿಪ್ರಾಯ ನೀಡಿ, ಕರಡು ನಿಯಮಗಳನ್ನು ಪರಿಶೋಧಿಸಿ, ಆಡಳಿತ ಇಲಾಖೆಗೆ ಹಿಂದಿರುಗಿಸಲಾಗಿತ್ತು. ಆದರೆ, ಈ ಬಗ್ಗೆ ಯಾವ ನಿರ್ಣಯ ತೆಗೆದುಕೊಂಡಿದೆ ಎಂಬುದು ಕಡತದಿಂದ ವೇದ್ಯವಾಗುತಿಲ್ಲ ಹಾಗೂ ಪ್ರಸ್ತುತ ಪ್ರಸ್ತಾಪಿತ ಕಡತದಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ಆದುದರಿಂದ, ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಈ ಇಲಾಖೆ ಈ ಹಿಂದೆ ನೀಡಿರುವ ಅಭಿಪ್ರಾಯ ಮತ್ತು ಪರಿಷ್ಕರಿಸಿದ ಕರಡು ನಿಯಮಗಳ ಕಡತವನ್ನು ಮಾಹಿತಿಗಾಗಿ ಒದಗಿಸುವುದು. | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯು ಕೋರಿರುವ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ಕರಡು ನಿಯಮಗಳನ್ನು ಸಿದ್ಧಪಡಿಸಿಕೊಂಡು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಿಶೋಧನೆಗೆ ಕಳುಹಿಸುವಂತೆ ನಿರ್ಣಯಿಸಲಾಯಿತು. |
| 2 | ಸದರಿ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಶೀಲಿಸಲು The Karnataka Education Department Services (Department of Public Instructions) (Recruitment) Rules, 1960ರ ಪ್ರತಿಯನ್ನು ಇತ್ತೀಚಿನ ತಿದ್ದುಪಡಿಗಳೊಂದಿಗೆ ಒದಗಿಸುವುದು. | |
| 3 | ಸದರಿ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಹೊಸದಾಗಿ ಹುದ್ದೆಗಳನ್ನು ಸೇರಿಸಿದ್ದರೆ, ಆ ಹುದ್ದೆಗಳ ಸೃಜನೆಯ ಸರ್ಕಾರಿ ಆದೇಶಗಳನ್ನು ಮತ್ತು ಯಾವುದೇ ಹುದ್ದೆಗಳನ್ನು ರದ್ದುಗೊಳಿಸಿದ್ದಲ್ಲಿ, ಆ ಹುದ್ದೆಗಳನ್ನು ರದ್ದುಗೊಳಿಸಿರುವ ಸರ್ಕಾರಿ ಆದೇಶಗಳನ್ನು ಹಾಗೂ ಹುದ್ದೆಗಳನ್ನು ಮರುಪದನಾಮಗೊಳಿಸಿದ್ದಲ್ಲಿ, ಮರುಪದನಾಮಗೊಳಿಸಿದ ಕಾರ್ಯಕಾರಿ ಆದೇಶದ ಪ್ರತಿಗಳನ್ನು ಒದಗಿಸಲು ಹಾಗೂ ಅಂತಿಮವಾಗಿ ಅಸ್ತಿತ್ವದಲ್ಲಿರುವ ತಾತ್ಕಾಲಿಕ ಹಾಗೂ ಖಾಯಂ ಹುದ್ದೆಗಳ ಪಟ್ಟಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಕಡತ ಸಲ್ಲಿಸುವುದು. | |
| 4 | ದಿ:01/04/2017ರಿಂದ ಹೊಸ ವೇತನ ಶ್ರೇಣಿಗಳು ಜಾರಿಗೆ ಬಂದಿರುವುದರಿಂದ, | |

| | | |
|---|---|---|
| | ಅದರಂತೆ, ಹುದ್ದೆಗಳಿಗೆ ಸಂಬಂಧಿಸಿದ ನೂತನ ವೇತನ ಶ್ರೇಣಿಗಳನ್ನು ನಮೂದಿಸಿ ಕಳುಹಿಸುವುದು. | |
| 5 | ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು The Karnataka Civil Services Act, 1978 ರಡಿಯಲ್ಲಿ ತಯಾರಿಸಿ, ಆರ್ಥಿಕ ಇಲಾಖೆ ಮತ್ತು ಸಿಆಸುಇ (ಸೇವಾ ನಿಯಮಗಳು) ನೀಡುವ ಅಭಿಪ್ರಾಯವನ್ನು ಪರಿಗಣಿಸಿ ಹಾಗೂ ಪ್ರಧಾನ ಕಾರ್ಯದರ್ಶಿಯವರ ಹಂತದಲ್ಲಿ ನಡೆಯುವ ವೃಂದ ಪರಿಶೀಲನಾ ಉಪ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕರಡು ನಿಯಮಗಳನ್ನು ಸಭೆಯ ನಡವಳಿಗಳೊಂದಿಗೆ ಈ ಇಲಾಖೆಯ ಪರಿಶೋಧನೆಗಾಗಿ ಕಳುಹಿಸುವುದು. | |

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಲಹೆಗಳನ್ನು ಅಳವಡಿಸಿಕೊಂಡು ಮತ್ತು ಆರ್ಥಿಕ ಇಲಾಖೆಯು ಕೋರಿರುವಂತೆ ಹುದ್ದೆಗಳ ಮಂಜೂರಾತಿ ಆದೇಶದ ಪ್ರತಿಗಳೊಂದಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿ ಸಹಮತಿ ಪಡೆದ ನಂತರ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯು ಕೋರಿರುವ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ಕರಡು ನಿಯಮಗಳನ್ನು ಸಿದ್ಧಪಡಿಸಿಕೊಂಡು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಿಶೋಧನೆಗೆ ಕಳುಹಿಸುವಂತೆ ನಿರ್ಣಯಿಸಲಾಯಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ.

**ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಕುರಿತಂತೆ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ದಿ:23/10/2018ರಂದು ನಡೆದ ವೃಂದ ಪರಿಶೀಲನಾ ಸಮಿತಿ ಸಭೆಯ ನಡವಳಿಗಳು:**

ಉಪಸ್ಥಿತರು:-

1) ಶ್ರೀ ಡಿ.ವಿ ಪ್ರಸಾದ್, ಭಾ.ಆ.ಸೇ — ಅಧ್ಯಕ್ಷತೆ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ, ಬೆಂಗಳೂರು.

2) ಡಾ. ಶಾಲಿನಿ ರಜನೀಶ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

3) ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.ಇವರ ಪರವಾಗಿ
ಶ್ರೀಮತಿ ಕೆ.ಉಮಾ .ಅಧೀನ ಕಾರ್ಯದರ್ಶಿ

4) ಸರ್ಕಾರದ ಕಾರ್ಯದರ್ಶಿ .
ಆರ್ಥಿಕ ಇಲಾಖೆ(ವೆಚ್ಚ). ಇವರ ಪರವಾಗಿ
ಶ್ರೀ ಹೇಮಣ್ಣ.ಜಿ.ಬಿ. ಉಪಕಾರ್ಯದರ್ಶಿ(ಸೇವೆಗಳು-1)

5) ಶ್ರೀ ಶ್ರೀಧರ್.ಜಿ,
ಸರ್ಕಾರದ ಅಪರ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ.

6) ಸರ್ಕಾರದ ಪ್ರಧಾನ ಕಾರ್ಯದರ್ಶಿ.
ಕಾನೂನು ಇಲಾಖೆ, ಇವರ ಪರವಾಗಿ
ಶ್ರೀ ಹೊಸಮನಿ ಪುಂಡಲೀಕ. ಅಪರ ಕಾರ್ಯದರ್ಶಿ-3.

7) ಶ್ರೀ ಆಂಜಿನಪ್ಪ.ಕೆ.ಜಿ
ಅಪರ ನಿರ್ದೇಶಕರು(ಆಡಳಿತ).
ಸಾರ್ವಜನಿಕ ಶಿಕ್ಷಣ ಇಲಾಖೆ.

ವೃಂದ ಪರಿಶೀಲನಾ ಸಮಿತಿ ಸಭೆಯ ಸಂದರ್ಭದಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸ್ವಾಗತಿಸುವ ಮೂಲಕ ಸಮಿತಿ ಸಭೆಗೆ ಚಾಲನೆ ನೀಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳು 1967ರಲ್ಲಿ ಜಾರಿಗೆ ಬಂದವುಗಳಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇನಿಡಿ 2017, ದಿ:15/12/2017ರಲ್ಲಿ ನೀಡಿದ ಸೂಚನೆಗಳನ್ವಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಗಾಗಿ ಪ್ರಸ್ತಾಪಿಸಿರುವುದನ್ನು ಸಮಿತಿಯು ಗಮನಿಸಿತು.

ಅಲ್ಲದೇ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಕುರಿತಂತೆ, ಉಪ-ಸಮಿತಿ ಸಭೆಯಲ್ಲಿ ಪ್ರಸ್ತಾವನೆಗಳ ಬಗ್ಗೆ ಚರ್ಚಿಸಿ ಕರಡು ನಿಯಮಗಳನ್ನು ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗಳೊಂದಿಗೆ ಸಮಾಲೋಚಿಸಿ, ಪರಿಶೋಧಿಸಿಕೊಂಡಿರುವುದನ್ನು ಸಮಿತಿಯು ಗಮನಿಸಿತು.

ಮುಂದುವರೆದು, ಪ್ರಸ್ತಾಪಿತ ಕರಡು ನಿಯಮಗಳಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ನಿರ್ಣಯ ಕೈಗೊಂಡಿತು

1. ಭಾಗ-1ರ ಕ್ರಮ.ಸಂಖ್ಯೆ-(7)ರ Educational Officers (Tutorials) ಈ ಹುದ್ದೆಗೆ ನೇಮಕಾತಿ ಕುರಿತಂತೆ ಶೇ.100ರಷ್ಟು ಮುಂಬಡ್ತಿಯಿಂದ ತುಂಬಬೇಕೆಂದು ಪ್ರಸ್ತಾಪಿಸಿರುವುದಕ್ಕೆ ಬದಲಾಗಿ, ಈ ಹಿಂದೆ ಇದ್ದಂತೆ ಶೇ.75ರಷ್ಟು ಮುಂಬಡ್ತಿ ಮೂಲಕ ಹಾಗು ಶೇ.25ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಬೇಕೆಂದು ಸಮಿತಿಯು ನಿರ್ಣಯಿಸಿತು
2. ದಿ:06/9/2018ರಂದು ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ವೃಂದ ಪರಿಶೀಲನಾ ಉಪ ಸಮಿತಿ ಸಭೆಯಲ್ಲಿ, ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು, ಸಂಬಂಧಪಟ್ಟ ವಿಷಯದಲ್ಲಿ ಕನಿಷ್ಟ ಶೇ.50ರಷ್ಟು ಅಂಕಗಳನ್ನು ಗಳಿಸಿರಬೇಕೆಂಬ ಕ್ರಮವನ್ನು ಸಮಗ್ರ ತಿದ್ದುಪಡಿಯಲ್ಲಿ ಅಳವಡಿಸಿಕೊಳ್ಳಲು ನಿರ್ಣಯಿಸಿ, ಅಂತಿಮಗೊಳಿಸಬೇಕೆಂದು ಸೂಚಿಸಿರುವುದನ್ನು ಕೈಬಿಡಲು ಸಮಿತಿಯು ಸೂಚಿಸಿತು.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಯಾವ ಯಾವ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದೋ, ಅಂತಹ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ನೇರ ನೇಮಕಾತಿ ಮೂಲಕ ಮತ್ತು ಬಡ್ತಿ ಮೂಲಕ ತುಂಬಲು ಅನುಪಾತವನ್ನು ಕಾಯ್ದುಕೊಳ್ಳುವಂತೆ ಸಮಿತಿಯು ಸೂಚಿಸಿತು.
4. ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಹಾಲಿ ಇರುವ ವಿಷಯ ಪರಿವೀಕ್ಷಕರ ಜೊತೆಗೆ ಪ್ರತಿ ಜಿಲ್ಲೆಗೆ ಒಂದರಂತೆ ಹಿಂದಿ ವಿಷಯ ಪರಿವೀಕ್ಷಕರ ಹುದ್ದೆಯನ್ನು ಸೇರ್ಪಡೆ ಮಾಡಲು ಸಮಿತಿಯು ಸೂಚಿಸಿತು.
5. ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಬಡ್ತಿ ನೀಡುವಾಗ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ನಿಗಧಿಪಡಿಸಿರುವ ಪ್ರಕ್ರಿಯೆಯನ್ನು ಕೈಬಿಡಲು ಸಮಿತಿಯು ಸೂಚಿಸಿತು.

ಮೇಲಿನ ಅಂಶಗಳ ಬಗ್ಗೆ ನಿರ್ಣಯ/ಸೂಚನೆ ನೀಡುವ ಮೂಲಕ ಪ್ರಸ್ತಾಪಿತ ಕರಡು ತಿದ್ದುಪಡಿ ನಿಯಮಗಳನ್ನು ಸಮಿತಿಯು ಅನುಮೋದಿಸಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

(ಶ್ರೀ ವಿ.ಪಿ ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಅನುಬಂಧ - 01

**ದಿನಾಂಕ 24-05-2018ರಂದು ಬೆಳಗ್ಗೆ 11-30ಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಸಂಬಂಧ ನಡೆದ ಸಭೆಯ ನಡವಳಿ.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀಮತಿ ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಶ್ರೀ ಕೆ.ಬಿ. ಅಂಜನಪ್ಪ, ಅಪರ ನಿರ್ದೇಶಕರು [ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಶ್ರೀ ಬಿ.ಕೆ. ಬಸವರಾಜು, ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಶ್ರೀಮತಿ ಫಿಲೋಮಿನಾ ಲೋಬೋ, ನಿರ್ದೇಶಕರು [ಪ್ರೌಢ ಶಿಕ್ಷಣ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಶ್ರೀ ನಾಗರಾಜ್.ಎಸ್.ಧೋಣಿ, ಉಪನಿರ್ದೇಶಕರು (ಆಡಳಿತ), ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಕಲಬುರ್ಗಿ.
6. ಶ್ರೀ ಎಂ.ಎಫ್.ಕುಂದಗೋಳ, ಉಪನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಧಾರವಾಡ.
7. ಶ್ರೀ ಕೆಂಚೇಗೌಡ, ಉಪನಿರ್ದೇಶಕರು, ನಿರ್ದೇಶಕರ ಕಛೇರಿ, ಡಿ.ಎಸ್.ಇ.ಆರ್.ಟಿ., ಬೆಂಗಳೂರು.
8. ಶ್ರೀ ಟಿ.ಎನ್.ಕಮಲಾಕರ, ಹಿರಿಯ ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಶ್ರೀ ಚನ್ನಬಸಪ್ಪ ಮುಧೋಳ್, ಹಿರಿಯ ಸಹಾಯಕ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಕಲಬುರ್ಗಿ.
10. ಶ್ರೀ ಮಂಜುನಾಥ್.ಆರ್, ಹಿರಿಯ ಸಹಾಯಕ ನಿರ್ದೇಶಕರು, ನಿರ್ದೇಶಕರ ಕಛೇರಿ, ಡಿ.ಎಸ್.ಇ.ಆರ್.ಟಿ., ಬೆಂಗಳೂರು.
11. ಶ್ರೀಮತಿ ಚಂದ್ರಕಲಾ, ಸಹಾಯಕ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

****************

ಶ್ರೀ ಕೆ.ಬಿ. ಅಂಜನಪ್ಪ, ಅಪರ ನಿರ್ದೇಶಕಕರು(ಆಡಳಿತ) ಇವರು ಸಭೆಯಲ್ಲಿ ಹಾಜರಿದ್ದವರನ್ನು ಸ್ವಾಗತಿಸಿದರು. ಹಾಗೂ ದಿನಾಂಕ: 02/02/2018ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ (ಸಿ.ಆಸು.ಇ) ಮಾನ್ಯ ವಿಜಯಭಾಸ್ಕರ್ ರವರ ಅಧ್ಯಕ್ಷತೆಯಲ್ಲಿ ನಡೆದ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಭೆಯಲ್ಲಿ ಚರ್ಚಿಸಿ ಸೂಚಿಸಿದಂತೆ ಸಿದ್ಧಪಡಿಸಲಾದ ಸೆಕ್ಷನ್ 'ಎ' ಮತ್ತು 'ಬಿ' ನಲ್ಲಿ ತಿದ್ದುಪಡಿಗಾಗಿ ಸಿದ್ಧಪಡಿಸಲಾದ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತು ವಿವರಿಸಿದರು. ಮೂರುವರೇ ತಿಂಗಳು ಕಳೆದಿದ್ದರೂ ಆಯುಕ್ತರ ಕಛೇರಿಯಿಂದ ವಿವರಗಳು ಬಾರದೇ ಇರುವುದಕ್ಕೆ ಪ್ರಧಾನ ಕಾರ್ಯದರ್ಶಿಯವರು ವಿಷಾಧಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು 1967ರಲ್ಲಿ ರಚಿಸಿ ಜಾರಿಗೊಳಿಸಿದ್ದು, ಅಲ್ಲಿಂದ ಇಲ್ಲಿಯವರೆಗೆ ಹಲವಾರು ಬದಲಾವಣೆಗಳು/ತಿದ್ದುಪಡಿಗಳು ಸರ್ಕಾರದ ಆದೇಶದಂತೆ ಜಾರಿಯಾಗಿದ್ದು, ಅಲ್ಲದೇ ಹೊಸ ಹುದ್ದೆಗಳು ಮಂಜೂರಾಗಿದ್ದು ಅವುಗಳು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೇರ್ಪಡೆಗೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಸಮಗ್ರ ತಿದ್ದುಪಡಿಗಾಗಿ ಅನೇಕ ಬಾರಿ ಪ್ರಸ್ತಾವನೆಯನ್ನು ಸಿಆಸುಇ ಗೆ ಸಲ್ಲಿಸಲಾಗಿರುತ್ತದೆ. ಅದರಂತೆ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 502 ಸೇ-3/2011 ದಿನಾಂಕ: 13/04/2011 ರಲ್ಲಿ ಶಿಕ್ಷಣ ಇಲಾಖೆಯ ವೃಂದ ಬಲಾಬಲದ ಬಗ್ಗೆ (ಹುದ್ದೆ ಮಂಜೂರಾತಿ ಸಂಖ್ಯೆ ಬಗ್ಗೆ) ಲಿಖಿತ ಆದೇಶ ಹೊರಡಿಸಲಾಗಿರುತ್ತದೆ. ತದನಂತರದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಬಗ್ಗೆ ಅನೇಕ ಬಾರಿ ಸಿಆಸುಇ ಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ 02/02/2018 ರಂದು ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಭೆ ನಡೆದಿರುತ್ತದೆ ಎಂದು ವಿವರಿಸಿದರು.

ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿಗೆ 6 ಭಾಗಗಳಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆ. ಅವುಗಳೆಂದರೆ–

ಭಾಗ–1 ಬೋಧಕ ವೃಂದ ಗ್ರೂಪ್–ಎ ಮತ್ತು ಬಿ ಅಧಿಕಾರಿಗಳಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು.
ಭಾಗ–2 ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು.

Scanned with CamScanner

೭೯೮ ೧

ಭಾಗ-3 ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು.

ಭಾಗ-4 ಬೋಧಕೇತರ ವೃಂದಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು.

ಭಾಗ-5 ಬೇರೆ ಇಲಾಖೆಯಿಂದ ನಿಯೋಜನೆ ಮೇರೆಗೆ ಭರ್ತಿ ಮಾಡುವ ಎ. ಬಿ ಹಾಗೂ ಸಿ ಹುದ್ದೆಗಳು.

ಭಾಗ-6 ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು ಎಂದು ಅಪರ ನಿರ್ದೇಶಕರು ವಿವರಿಸಿದರು.

- ಭಾಗ-1 ಬೋಧಕ ವೃಂದದ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ವೃಂದಗಳನ್ನು ಮತ್ತು ಅದಕ್ಕೆ ತಿದ್ದುಪಡಿ ತರಲು ಉದ್ದೇಶಿಸಿರುವ ಅಂಶಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳನ್ನು ಈ ಕೆಳಗೆ ದಾಖಲಿಸಲಾಗಿದೆ.

  1. ಮಾನ್ಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಭಾಗ-1ರಲ್ಲಿನ ಅಪರ ಆಯುಕ್ತರ ಹುದ್ದೆಗೆ ಐಎಎಸ್/ಕೆಎಎಸ್ ಅಧಿಕಾರಿಗಳು ಸಿಗದೇ ಇರುವ ಪಕ್ಷದಲ್ಲಿ, ಒಬ್ಬ ಅಪರ ನಿರ್ದೇಶಕರ ಶ್ರೇಣಿಯ ಅಧಿಕಾರಿಯನ್ನು ತುಂಬಿದರೆ ಸೂಕ್ತ ಎಂದು ಚರ್ಚಿಸಲಾಯಿತು. ಅದರಂತೆ ಶಿಕ್ಷಣ ಇಲಾಖೆಯ ನಿರ್ದೇಶಕರ ವೃಂದದ ಹುದ್ದೆಗಳ ನಂತರ ಜಂಟಿ ನಿರ್ದೇಶಕರ ವೃಂದದ ಹುದ್ದೆಗಳಿಗಿಂತ ಮೊದಲು ಅಪರ ನಿರ್ದೇಶಕರ ಪದನಾಮದ ಒಂದೊಂದು ಹುದ್ದೆಗಳನ್ನು ಪ್ರತಿ ಆಯುಕ್ತಾಲಯಗಳಿಗೆ ಒಂದರಂತೆ ಒಟ್ಟು 3ಹುದ್ದೆಗಳ ವೇತನ ಶ್ರೇಣಿ 44250-1050-45300-1200-52500-1350-60600 ಯಲ್ಲಿ ಮಂಜೂರು ಮಾಡುವಂತೆ ಪ್ರತ್ಯೇಕ ವೃಂದ ಒಂದನ್ನು ರಚಿಸುವಂತೆ ಮತ್ತು ಆ ಹುದ್ದೆಗಳನ್ನು ಶಿಕ್ಷಣ ಇಲಾಖೆಯ ಬೋಧಕ ವೃಂದದ ಅಧಿಕಾರಿಗಳಿಂದಲೇ ಜೇಷ್ಠತಾ ಅನುಸಾರವಾಗಿ ಭರ್ತಿ ಮಾಡುವಂತೆಯೂ ಸಭೆಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆಯು ವೃಂದ ಮತ್ತು ನೇಮಕಾತಿಯಲ್ಲಿ ತಿದ್ದುಪಡಿ ಮಾಡಿ ಮಂಡಿಸುವಂತೆಯೂ ಪ್ರಧಾನ ಕಾರ್ಯದರ್ಶಿಯವರು ಸೂಚಿಸಿದರು.

  2. ಜಂಟಿ ನಿರ್ದೇಶಕರ ವೃಂದದ ವೇತನ ಶ್ರೇಣಿ 40050-56550ರಲ್ಲಿ ಒಂದು ಹುದ್ದೆಯನ್ನು ಆಯುಕ್ತರ ಕಛೇರಿಯಲ್ಲಿ ಇ-ಆಡಳಿತ ಘಟಕ ಮತ್ತು ಹೆಚ್.ಆರ್.ಎಂ.ಎಸ್ ವಿಭಾಗಗಳ ಉಸ್ತುವಾರಿ ನೀಡುವಂತೆ ಮತ್ತು ಶಿಕ್ಷಣ ಇಲಾಖೆಯ ಉಪನಿರ್ದೇಶಕರ ವೃಂದದಿಂದ ಬಡ್ತಿ ಮೂಲಕ ಭರ್ತಿ ಮಾಡುವಂತೆ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು. ಅಂತೆಯೇ ಅವಕಾಶವನ್ನು ಕಲ್ಪಿಸಿ ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಗೆ ಪ್ರಸ್ತಾವನೆ ಮಂಡಿಸಲು ತೀರ್ಮಾನಿಸಲಾಯಿತು.

  3. ಪ್ರಸ್ತುತ ಗ್ರೂಪ್-ಎ ವೃಂದದ ಶಿಕ್ಷಣಾಧಿಕಾರಿಗಳ ಹುದ್ದೆಗಳನ್ನು ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ವೃಂದದ ಹುದ್ದೆಗಳಿಂದ 25:75 ಅನುಪಾತದಲ್ಲಿ ಕ್ರಮವಾಗಿ ನೇರ ನೇಮಕಾತಿ ಮತ್ತು ಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ. ನೇರ ನೇಮಕಾತಿಯನ್ನು ಮಾಡುವುದರಿಂದ ಆಯ್ಕೆಯಾಗುವ ಅಧಿಕಾರಿಗಳಲ್ಲಿ ಪದವಿ ಜೊತೆಗೆ ಶಿಕ್ಷಣ ಪದವಿಯನ್ನು ಹೊಂದಿದ ಮತ್ತು ಇಲಾಖೆಯಲ್ಲಿ ಅನುಭವವಿರುವ ಅಧಿಕಾರಿಗಳು ಆಯ್ಕೆಯಾಗುವುದಿಲ್ಲ ಎಂದು ಶಿಕ್ಷಕರ ಸಂಘದವರು ಮನವಿ ನೀಡಿರುತ್ತಾರೆ. ಆದ್ದರಿಂದ ಗ್ರೂಪ್-ಬಿ ಹುದ್ದೆಯಲ್ಲಿ ಅನುಭವ ಪಡೆದ ಅಧಿಕಾರಿಗಳಿಗೆ ಬಡ್ತಿ ಮೂಲಕ ಭರ್ತಿ ಮಾಡುವುದರಿಂದ ಗ್ರೂಪ್-ಎ ಹುದ್ದೆಗೆ ಇಲಾಖೆಯಲ್ಲಿ ಅನುಭವವಿರುವವರನ್ನು ಭರ್ತಿ ಮಾಡಿದಂತಾಗುತ್ತದೆ ಎಂದು ಚರ್ಚಿಸಿ ಈಗಿರುವ 25:75 ಅನುಪಾತವನ್ನು ತಿದ್ದುಪಡಿ ಮಾಡಿ ನೂರಕ್ಕೆ ನೂರರಷ್ಟು (100%) ಗ್ರೂಪ್-ಎ ವೃಂದದ ಶಿಕ್ಷಣಾಧಿಕಾರಿಗಳ ಹುದ್ದೆಗಳನ್ನು ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗಳಿಂದ ಬಡ್ತಿ ಮೂಲಕವೇ ಭರ್ತಿ ಮಾಡಲು ತೀರ್ಮಾನಿಸಲಾಯಿತು. ಆದರೆ ಈ ಶೇ.25ರಷ್ಟು ಹುದ್ದೆಗಳನ್ನು ಮುಖ್ಯಶಿಕ್ಷಕರ ಹುದ್ದೆಯಲ್ಲಿ 5 ವರ್ಷ ಸೇವಾ ಅನುಭವ ಹೊಂದಿದ/ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅದರಲ್ಲಿ ಅರ್ಹತೆ ಹೊಂದಿದವರನ್ನು ನೇಮಕಾತಿ ನಿಯಮಗಳಡಿಯಲ್ಲಿ ಗಳಿಸಿದ ಅಂಕಗಳ ಆಧಾರದ ಹಾಗೂ ಸೇವಾ ಜೇಷ್ಠತೆ ಆಧಾರದ ಮೇಲೆ ಭರ್ತಿ ಮಾಡುವುದೆಂತಲೂ ಸಭೆಯಲ್ಲಿ ತೀರ್ಮಾನಿಸಲಾಯಿತು ಮತ್ತು ಈ ಪ್ರಕ್ರಿಯೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅಧಿಕೃತವಾಗಿ ತಿದ್ದುಪಡಿ ಮಾಡಿ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವುದೆಂತಲೂ ಸ್ಪಷ್ಟೀಕರಿಸಲಾಯಿತು. ಅಂತೆಯೇ ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ

Scanned with CamScanner

296 F

ಸಲ್ಲಿಸುವಂತೆ ಹಾಗೂ ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಪ್ರಸ್ತಾವನೆಯಲ್ಲಿ ತಿದ್ದುಪಡಿ ಮಾಡುವಂತೆಯೂ ಸಹ ಸಭೆಯಲ್ಲಿ ತೀರ್ಮಾನಿಸಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಸೂಚಿಸಿದರು.

4. ಗ್ರೂಪ್–ಬಿ ವೃಂದದ ವಿಷಯ ಪರಿವೀಕ್ಷಕರು (ಸಂಸ್ಕೃತ) ಈ ಹುದ್ದೆಯು ವಿಭಾಗ ಮಟ್ಟದಲ್ಲಿ 4 ಹುದ್ದೆಗಳಿದ್ದು ಪ್ರಸ್ತುತ 163 ಸಂಸ್ಕೃತ ಶಿಕ್ಷಕರು ಮಾತ್ರ ಇರುವುದರಿಂದ ಹಾಗೂ ಇದಕ್ಕಾಗಿ ವಿದ್ಯಾರ್ಥಿಗಳ ಬೇಡಿಕೆ ಇಲ್ಲದೆ ಇರುವುದರಿಂದ ಹಾಗೂ ಸಂಸ್ಕೃತ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೂ ಸಹ ಬಡ್ತಿ ನೀಡುತ್ತಿರುವುದರಿಂದ ವಿಭಾಗ ಮಟ್ಟದಲ್ಲಿನ ವಿಷಯ ಪರಿವೀಕ್ಷಕರು (ಸಂಸ್ಕೃತ) ಎಂಬುದನ್ನು ತಿದ್ದುಪಡಿ ಮಾಡಿ ಗ್ರೂಪ್–ಬಿ ವೃಂದದ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದಕ್ಕೆ ವಿಲೀನಗೊಳಿಸಿಕೊಂಡು ಹುದ್ದೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಿರ್ಧರಿಸಲಾಯಿತು.

ಉಳಿದ ವಿವಿಧ ಪದನಾಮಗಳ ಹುದ್ದೆಗಳಿಗೆ ಸಂಬಂಧಿಸಿದಂತೆ ಮತ್ತು ಈಗಾಗಲೇ ಮಂಜೂರಾಗಿರುವ ಹೊಸ ಹುದ್ದೆಗಳಿಗೆ ಸಂಬಂಧಿಸಿದಂತೆ, ಚಿಕ್ಕ ಪುಟ್ಟ ಬದಲಾವಣೆಗಳು ಇದ್ದಲ್ಲಿ ಆಯುಕ್ತರ ಹಂತದಲ್ಲಿ ಬದಲಾವಣೆ ಮಾಡಿದ ಅಂಶಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ ಎಲ್ಲಾ ವಿಭಾಗಗಳನ್ನು ಕ್ರೋಢೀಕರಿಸಿ ಸಲ್ಲಿಸುವಂತೆ ಸೂಚಿಸಲಾಯಿತು.

- **ಪ್ರೌಢ ಶಿಕ್ಷಣ ಇಲಾಖೆಯ (ಭಾಗ–2) ವಿಷಯ ಚರ್ಚಿಸಲಾಯಿತು. ಮಾಹಿತಿಯನ್ನು ಈ ಕೆಳಕಂಡಂತೆ ಟಿಪ್ಪಣಿಸಲಾಗಿದೆ.**

1. ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್–2 ಎಂದು ಇರುವ ಪದನಾಮವನ್ನು ಪ್ರೌಢಶಾಲಾ ಸಹ ಶಿಕ್ಷಕರು ಎಂದು ಪರಿಗಣಿಸಲು ತಿಳಿಸಿದರು. (own pay basis)
2. ಸಂಗೀತ ನೃತ್ಯ ನಾಟಕ ಹಾಗೂ ಶಿಕ್ಷಣ ಶಿಕ್ಷಕರು ಗ್ರೇಡ್–1 ಮತ್ತು ಗ್ರೇಡ್–2 ವೃಂದಗಳನ್ನು ಒಂದೇ ಕೇಡರ್ ಎಂದು ಪರಿಗಣಿಸಿ, ವೃತ್ತಿ ಶಿಕ್ಷಣ ಶಿಕ್ಷಕರು (vocational education teachers) ಎಂದು ನಮೂದಿಸುವುದು. ಹಾಗೂ ಗ್ರೇಡ್–1 ಮತ್ತು ಗ್ರೇಡ್–2ನ್ನು ಕೈಬಿಡುವಂತೆ ನಿರ್ಣಯಿಸಲಾಯಿತು.
3. ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಪದನಾಮವನ್ನು ಸಹ ಶಿಕ್ಷಕರು (ದೈಹಿಕ ಶಿಕ್ಷಣ) ಎಂದು ಕರಡು ಶಿಫಾರಸ್ಸು ನಿಯಮದಲ್ಲಿ ನಮೂದಿಸಿರುವುದನ್ನು ಒಪ್ಪಲು ನಿರ್ಣಯಿಸಲಾಯಿತು. ಈ ಕಾರಣ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅವರಿಗೆ ಸಹ ಶಿಕ್ಷಕರಿಂದ ತಾಲ್ಲೂಕು ಅಧಿಕಾರಿಯಾಗಿ (ವೇತನ ಶ್ರೇಣಿ 43100–83900) 2 ಬಡ್ತಿ ಸಿಗುತ್ತದೆ ಉಳಿದವರಿಗೆ ಇಲ್ಲ!
4. ಹಿಂದಿ ವಿಷಯ ಶಿಕ್ಷಕರ ವಿದ್ಯಾರ್ಹತೆ ಬಗ್ಗೆ ಕರಡು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆ ಬಗ್ಗೆ ಚರ್ಚಿಸಲಾಗಿ ಕರಡು ಶಿಫಾರಸ್ಸು ನಿಯಮದಲ್ಲಿ ನಮೂದಿಸಿರುವ ವಿದ್ಯಾರ್ಹತೆಯನ್ನು ಒಪ್ಪಲಾಯಿತು.
5. ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎನ್.ಸಿ.ಟಿ.ಇ ನಿಯಮಗಳಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಅಳವಡಿಸಲು ಸೂಚಿಸಲಾಯಿತು.

- **ಪ್ರಾಥಮಿಕ ಶಿಕ್ಷಣ ಇಲಾಖೆಯ (ಭಾಗ–3) ವಿಷಯ ಚರ್ಚಿಸಲಾಯಿತು. ಮಾಹಿತಿಯನ್ನು ಈ ಕೆಳಕಂಡಂತೆ ಟಿಪ್ಪಣಿಸಲಾಗಿದೆ.**

1. 6–8ನೇ ತರಗತಿ ಪದವೀಧರ ಶಿಕ್ಷಕರ ವೃಂದಕ್ಕೆ ಆಯ್ಕೆಯಾಗಿ ಶೇ.25ರ ಪ್ರಮಾಣದ ಸೇವಾ ನಿರತ ಶಿಕ್ಷಕರ ಕೋಟಾ ನಿಗಧಿಯಾಗಿದೆ. ಸದರಿ ಕೋಟಾದಲ್ಲಿ ಆಯ್ಕೆ ಹೊಂದಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಗಧಿಗೊಳಿಸಲಾಗಿದೆ. ಈ ವಿಷಯದ ಕುರಿತು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ದಿನಾಂಕ: 19/05/2018ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ಸದರಿ ಹೊಸ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿಗಳನ್ನು ತಂದು ಶೇ.25 ಎಂದು ನಿಗಧಿಗೊಳಿಸಿರುವ ಪ್ರಮಾಣವನ್ನು ಶೇಕಡ.50ಕ್ಕೆ ಹೆಚ್ಚಿಸಲು ಮತ್ತು ಯಾವುದೇ ಪರೀಕ್ಷೆಗಳನ್ನು ನಿಗಧಿಗೊಳಿಸದೇ ಜೇಷ್ಠತೆ ಆಧಾರದ ಮೇಲೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲು ಕೋರಿರುವ ಬಗ್ಗೆ ಪರಿಶೀಲಿಸಲು ಕೋರಿರುತ್ತಾರೆ. ಅದರಂತೆ ಶೇ.50

Scanned with CamScanner

ಕೋಟಾ ಹೆಚ್ಚಿಸಲು ಪ್ರಸ್ತಾವನೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಸೂಚನೆ ನೀಡಲಾಯಿತು.

- ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವೃಂದ (ಭಾಗ-4) ವಿಷಯದ ಬಗ್ಗೆ ಚರ್ಚಿಸಲಾಯಿತು. ಮಾಹಿತಿಯನ್ನು ಈ ಕೆಳಕಂಡಂತೆ ಟಿಪ್ಪಣಿಸಲಾಗಿದೆ.

1. ಪ್ರಸ್ತುತ ಬೆರಳಚ್ಚು ಸಂಸ್ಥೆಗಳಲ್ಲಿ ಬೆರಳಚ್ಚು ತರಬೇತಿಯ ಜೊತೆಗೆ ಕಂಪ್ಯೂಟರ್ ಶಿಕ್ಷಣವನ್ನು ಸಹ ಸೇರ್ಪಡೆ ಮಾಡಲಾಗಿರುವುದರಿಂದ ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ) ಹುದ್ದೆಯ ಪದನಾಮವನ್ನು ಹಿರಿಯ ಸಹಾಯಕ ನಿರ್ದೇಶಕರು (ಕಂಪ್ಯೂಟರ್ ಶಿಕ್ಷಣ) ಎಂದು ಬದಲಾವಣೆ ಮಾಡಲು ನಿರ್ಧರಿಸಲಾಯಿತು. ಈ ಹಿನ್ನಲೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ) ಹುದ್ದೆಯ ಫೀಡರ್ ಕೇಡರ್ ಆದ ಸಹಾಯಕ ನಿರ್ದೇಶಕರು(ವಾಣಿಜ್ಯ) ಹುದ್ದೆಯ ಪದನಾಮವನ್ನು ಸಹಾಯಕ ನಿರ್ದೇಶಕರು (ಕಂಪ್ಯೂಟರ್ ಶಿಕ್ಷಣ) ಎಂದು ಬದಲಾವಣೆ ಮಾಡಲು ಸಹ ನಿರ್ಧರಿಸಲಾಯಿತು.

2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 11036-11042/2016 ಶ್ರೀ ನಾಗರಾಜ ರಾಮಶೆಟ್ಟಿ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಈ ಪ್ರಕರಣದಲ್ಲಿ ದಿನಾಂಕ: 20/09/2017ರ ತೀರ್ಪಿನನ್ವಯ ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಮಾಹಿತಿ 2014 ದಿನಾಂಕ: 26/08/2015ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಸೃಜನೆಯಾಗಿರುವ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮಾಡುವುದರ ಬದಲಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಧೀಕ್ಷಕರು. ಪ್ರದಸ. ಹುದ್ದೆಯ ಜ್ಯೇಷ್ಠತಾ ಪಟ್ಟಿಯಲ್ಲಿನ ಜ್ಯೇಷ್ಠತೆಯನುಸಾರ ಅರ್ಹ ಸೇವಾವಧಿ ಪೂರ್ಣೈಸಿರುವ ಮತ್ತು ಎಸ್.ಎ.ಎಸ್ ಪರೀಕ್ಷೆ ಹಾಗೂ ಅಕೌಂಟ್ಸ್ ಹೈಯರ್ ಪರೀಕ್ಷೆ ಪಾಸು ಮಾಡಿರುವ ಅರ್ಹ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡುವುದರ ಮುಖೇನ ಭರ್ತಿ ಮಾಡುವಂತೆಯೂ ಒಂದು ವೇಳೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅರ್ಹ ಅಭ್ಯರ್ಥಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಈ ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ಭರ್ತಿ ಮಾಡುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 322 ಎಲ್‌ಬಿಪಿ 2017 ಬೆಂಗಳೂರು ದಿನಾಂಕ: 16/05/2018 ರಲ್ಲಿ ಆದೇಶವಾಗಿರುತ್ತದೆ. ಅದರಂತೆ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದನ್ವಯ ಭರ್ತಿ ಮಾಡುವಂತೆ ನಿರ್ಧರಿಸಲಾಯಿತು.

3. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಮಂಜೂರಾಗಿರುವ ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನು ಪ್ರಸ್ತುತ ಸರ್ಕಾರದ ಆದೇಶದನ್ವಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಯ ಮೇರೆಗೆ ಎಂದು ಆದೇಶಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ 322 ಎಲ್‌ಬಿಪಿ 2017 ಬೆಂಗಳೂರು ದಿನಾಂಕ: 16/05/2018 ರಲ್ಲಿ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅರ್ಹ ಅಭ್ಯರ್ಥಿಗಳಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದಂತೆ ಭರ್ತಿ ಮಾಡಲು ಆದೇಶವಾಗಿದ್ದು, ಅದರ ಹಿನ್ನೆಲೆಯಲ್ಲಿ ಸದರಿ ಹುದ್ದೆಯನ್ನು ಪ್ರಥಮ ದರ್ಜೆ ಸಹಾಯಕ ಹುದ್ದೆಯೆಂದು ಮರು ಪದನಾಮೀಕರಿಸಿ ಇಲಾಖೆಯ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ನೇರ ನೇಮಕಾತಿ ಹಾಗೂ ಬಡ್ತಿಯಿಂದ ಭರ್ತಿ ಮಾಡುವ ಬಗ್ಗೆ ನಿರ್ಧರಿಸಲಾಯಿತು ಹಾಗೂ ಬಡ್ತಿಗಾಗಿ ಕನಿಷ್ಠ 3 ವರ್ಷ ಅನುಭವ ಇರಬೇಕು ಎಂದು ಸೂಚಿಸಲಾಯಿತು.

- ಭಾಗ-5 ಮತ್ತು 6 ರಲ್ಲಿನ ಮಾಹಿತಿಗಳನ್ನು ಪರಿಶೀಲಿಸಿದ ನಂತರ ಸಲ್ಲಿಸಿರುವ ಪ್ರಸ್ತಾವನೆಯನ್ನು ಯಥಾವತ್ತಾಗಿ ಉಳಿಕೊಳ್ಳಲು ತೀರ್ಮಾನಿಸಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ॥ ಶಾಲಿನಿ ರಜನೀಶ್)

Scanned with CamScanner